# ನಟನೆಯೂ ಕಾವ್ಯ



## ಅಂಜನ್ ಭಾರದ್ವಾಜ್

ಕಲರ್ಸ್ ಸೂಪರ್‌ನ 'ಪಾಪ ಪಾಂಡು'ನ ಪುಂಡ

❖ನಿಮ್ಮನ್ನು ಪರಿಚಯಿಸಿಕೊಳ್ಳುವುದಾದರೆ...

ತಂದೆ ಅನಂತ ಪದ್ಮನಾಭ ಖಾಸಗಿ ಕಂಪನಿಯೊಂದರಲ್ಲಿ ಹಣಕಾಸು ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ತಾಯಿ ಅರುಣಾ ಅನಂತ ಅವರೂ ಖಾಸಗಿ ಕಂಪನಿಯ ಸಂಶೋಧನಾ ವಿಭಾಗದಲ್ಲಿ ಕೆಲಸ ಮಾಡುತ್ತಾರೆ. ಅವರಿಗೆ ಏಕ ಮಾತ್ರ ಪುತ್ರ ನಾನು. ನನಗೆ ತಾತ– ಅಜ್ಜಿ ಎಂದರೆ ಸರ್ವಸ್ವ. ಈಗ ಅವರು ಇಲ್ಲ. ಅವರ ಪ್ರೀತಿ ನನ್ನನ್ನು ಪೊರೆದಿದೆ. ಉಳಿದಂತೆ ಹೇಳುವುದಾದರೆ ನನ್ನ ವೃತ್ತಿ, ಶಿಕ್ಷಣದ ಬಗ್ಗೆ ನನ್ನ ತಂದೆ– ತಾಯಿ ಯಾವ ನಿರ್ಬಂಧವನ್ನೂ ಹೇರಿಲ್ಲ. ನನ್ನ ಆಶೆಯ ರಕ್ಷಣೆಗೆ ತಡೆಗೋಡೆಯಂತೆ ಅವರಿಬ್ಬರೂ ನಿಂತಿದ್ದಾರೆ. ನನ್ನ ವೃತ್ತಿ, ಭವಿಷ್ಯತ್ತಿನ ಬಗ್ಗೆ ಬೇರೆಯವರು ಚಿಂತಿಸಿ ಚರ್ಚಿಸುವ ಪರಿಗೆ ಅವರೇ ಪ್ರತಿಕ್ರಿಯೆ ನೀಡುವುದರಿಂದ ಅವೆಲ್ಲದರಿಂದಲೂ ಬಚಾವಾಗಿದ್ದೇನೆ.

❖ನಟನೆ ಏಕೆ ಇಷ್ಟ ಆಯ್ತು? ಅದಕ್ಕೆ ಹೇಗೆ ಸಿದ್ಧತೆ ಮಾಡಿದಿರಿ?

ಏಳೆಂಟು ವರ್ಷಗಳಿಂದ ರಂಗಭೂಮಿಯಲ್ಲಿದ್ದೇನೆ. ನಟನೆಯಲ್ಲಿ ಏನೋ ಮಜಾ ಇದೆ ಎನ್ನುವುದು ಬಾಲ್ಯದಲ್ಲೇ ಗೊತ್ತಾಯಿತು. ಅದರಿಂದಾಗಿ ನಟನೆ ಹವ್ಯಾಸ ಅಥವಾ ವೃತ್ತಿ ಎಂಬುವುದನ್ನು ಮೀರಿ ಬದುಕಾಗಿದೆ. ಅಕಾಡೆಮಿಕ್ ಆಗಿ ನೋಡುವಾಗ ಎಂಜಿನಿಯರ್, ಡಾಕ್ಟರ್, ಲಾಯರ್ ಹೀಗೆ ವೃತ್ತಿಪರ ಪ್ರತ್ಯೇಕ ಜ್ಞಾನಶಾಖೆಗಳಿವೆ. ನಟನೆಯಲ್ಲಿ ಈ ಎಲ್ಲಾ ಜ್ಞಾನಶಾಖೆಗಳ ರಸಪಾಕ ಸೇರಿದೆ. ಒಬ್ಬ ನಟ ಸಮಯ ಬಂದಾಗ ವೈದ್ಯನೂ, ಎಂಜಿನಿಯರ್, ಲಾಯರ್ ಸೇರಿದಂತೆ ಏನೆಲ್ಲಾ ಆಗುತ್ತಾನೆ. ಅದೆಲ್ಲವೂ ಕೇವಲ ಡೈಲಾಗ್ ಒಪ್ಪಿಸುವ ಕ್ರಿಯೆ ಅಲ್ಲ. ನಟ ಪಾತ್ರದ ಆಳಕ್ಕೆ ಇಳಿಯುತ್ತಾನೆ. ಪಾತ್ರವನ್ನು ತನ್ನೊಳಗೆ ತಂದುಕೊಳ್ಳುತ್ತಾನೆ.

ನನಗೆ ನಟನೆಯೇ ಜೀವನ ಏಕಾಯಿತು ಎಂದರೆ, ಏಳನೇ ತರಗತಿಯಲ್ಲಿ ಓದುವಾಗ ಮೂಕಾಭಿನಯ ಮಾಡಿದ್ದೆ. ಪ್ರೌಢಶಾಲೆಗೆ ಪ್ರವೇಶಿಸಿದಾಗ ಪ್ರಥಮ ಭಾಷೆ ಸಂಸ್ಕೃತವನ್ನು ಆಯ್ಕೆ ಮಾಡಿಕೊಂಡೆ. ನಮಗೆಲ್ಲ ಅದು ಹೊಸ ಭಾಷೆ. ಅದನ್ನು ಪರಿಚಯಿಸಲು ಶಿಕ್ಷಕರು ನಾಟಕದ ರೂಪವನ್ನು ನೀಡಿದರು. ಅದರಲ್ಲಿ ನಟಿಸುತ್ತಾ ನಟನೆಯನ್ನೇ ಮೈಗೂಡಿಸಿಕೊಂಡೆ. ಅದರಲ್ಲಿಯೇ ಕೌಶಲ್ಯವನ್ನು ವೃದ್ಧಿಪಡಿಸಿಕೊಳ್ಳಲು ನೀನಾಸಂನಲ್ಲಿ ಒಂದು ತಿಂಗಳು ತರಬೇತಿ ಪಡೆದೆ. ನಂತರ ಮುಂಬೈನ ಅನುಪಮ್ ಖೇರ್ ಅವರ ಸಂಸ್ಥೆಯಲ್ಲಿಯೂ ಒಂದಿಷ್ಟು ಕಾಲ ತರಬೇತಿ ಪಡೆದೆ. ನಂತರ ಪುದುಚೇರಿಯಲ್ಲಿ 'ಆದಿಶಕ್ತಿ' ಎನ್ನುವ ಸಂಸ್ಥೆ ನೀಡುವ ಹತ್ತು ದಿನಗಳ ತರಬೇತಿಯನ್ನೂ ಪಡೆದೆ. ಅವರು ಅಲ್ಪಾವಧಿಯಲ್ಲಿ ಉಸಿರು ಮತ್ತು ಭಾವವನ್ನು ಪಳಗಿಸುವ ಕಲೆಯನ್ನು ಕಲಿಸಿಕೊಡುತ್ತಾರೆ.

❖ನಿಮ್ಮ ಬಯಕೆಗಳು ಅನ್ನುವುದು ಏನಾದರೂ ಇವೆಯಾ?

ನಟನಾಗಿ ಹಲವು ಪಾತ್ರಗಳಲ್ಲಿ ನಟಿಸಬೇಕು. ನಟನೆಯಲ್ಲಿ ನನಗೆ ಆದರ್ಶಗಳಿವೆ. ಇರ್ಫಾನ್, ನವಾಜುದ್ದೀನ್ ಸಿದ್ದಿಕಿ ನನಗೆ ಅತ್ಯಂತ ಪ್ರೀತಿಯ ನಟರು. ಅಂತೆಯೇ ಜಗತ್ತಿನ ಬೇರೆ ಬೇರೆ ಭಾಷೆಯ ಸಿನಿಮಾಗಳನ್ನು ನೋಡುತ್ತೇನೆ. ಅಮೆರಿಕದ ನಟರೊಬ್ಬರು 'ನಟ ಮೊದಲು ಕವಿ ಆಗಬೇಕು, ಎಲ್ಲರಿಗೂ ಅರ್ಥ ಆಗಬೇಕು ಎಂದೇನೂ ಇಲ್ಲ. ಅದು ಮನೋರಂಜನೆಯನ್ನು ನೀಡುವಂತಿದ್ದರೆ. ಅದು ತನ್ನಿಂದ ತಾನೆ ಅರ್ಥ ಮಾಡಿಸುತ್ತಾ ಹೋಗುತ್ತದೆ' ಎಂದು ಹೇಳುತ್ತಾರೆ. ಅಂದರೆ ನಟನೆ ಕಾವ್ಯ. ನಟನೆ ದೇಹವನ್ನು ಪ್ರದರ್ಶಿವುದಲ್ಲ. ಪಾತ್ರದ ಬದುಕನ್ನು ಸೂಕ್ಷ್ಮವಾಗಿ ಅನಾವರಣ ಮಾಡುವುದು. ನಟನಿಗೆ ಪಾತ್ರವನ್ನು ಸಂಶೋಧಿಸಿ ತನ್ನೊಳಗೆ ಅದನ್ನು ತೆಗೆದುಕೊಳ್ಳುವ ಕ್ರಿಯೆ. ಪಾತ್ರ ಹುಚ್ಚನಾಗಿ, ಭಿಕ್ಷುಕನಾಗಿ, ರಾಜ, ಮಹಾರಾಜನಾಗಿ, ಕುಸ್ತಿಪಟುವಾಗಿ ಏನೇ ಆದರೂ ಅದನ್ನು ಮಾಡಲು ಸಿದ್ಧನಿರಬೇಕು.

■ ರಾಘವೇಂದ್ರ